# ಪಾಕಿಸ್ತಾನದ ಮಿಯಾ



■ ಪ್ರವೀಣ ಕುಲಕರ್ಣಿ

ಪಾಕಿಸ್ತಾನದ ಅತ್ಯಂತ ಪ್ರಭಾವಿ ಕುಟುಂಬಗಳಲ್ಲಿ ಅಲ್ಲಿನ ಪಂಜಾಬ್ ಪ್ರಾಂತ್ಯದ ಲಾಹೋರ್‌ನಲ್ಲಿ ನೆಲೆ ಕಂಡುಕೊಂಡಿರುವ ಷರೀಫ್ ಕುಟುಂಬವೂ ಒಂದು. ಸ್ಟೀಲ್ ಉದ್ಯಮದ ದೈತ್ಯ ಎನಿಸಿದ ಇತ್ತೇಫಾಕ್ ಗ್ರೂಪ್‌ನ ಒಡೆತನವನ್ನು ಹೊಂದಿದ ಈ ಕುಟುಂಬ, 'ಮಿಯಾ' ಎಂಬ ಬಿರುದನ್ನು ತನ್ನ ಹೆಸರಿನ ಹಿಂದೆ ಹೆಮ್ಮೆಯಿಂದ ಬಳಸುತ್ತದೆ. 'ಮಿಯಾ' ಎಂದರೆ ರಾಜ. ಹೌದು, ಈ ಕುಟುಂಬದ ಪ್ರಮುಖ ಸದಸ್ಯರೆಲ್ಲ ರಾಜನಂತೆಯೇ ಬಾಳಿದವರು, ಅಧಿಕಾರವನ್ನೂ ಚಲಾಯಿಸಿದವರು. ಅಲ್ಲವೆ ಮತ್ತೆ – ಷರೀಫ್ ಕುಟುಂಬ ಪಾಕಿಸ್ತಾನಕ್ಕೆ ಇಬ್ಬರು ಪ್ರಧಾನಿಗಳನ್ನೂ ಕೊಟ್ಟಿದೆ. ಅದರಲ್ಲಿ ಒಬ್ಬರು ಮೂರು ಬಾರಿ ಪ್ರಧಾನಿಯಾಗಿ, ಕೊನೆಗೆ ದೇಶ ಬಿಟ್ಟು ಹೋಗಬೇಕಾದ ನವಾಜ್ ಅವರಾದರೆ, ಮತ್ತೊಬ್ಬರು ಕಳೆದ ವಾರವಷ್ಟೇ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿರುವ ಶಹಬಾಝ್.

ಹಾಗೆ ನೋಡಿದರೆ ಷರೀಫ್ ಅವರದು ಭಾರತೀಯ ಮೂಲದ ಕುಟುಂಬ. ಕಾಶ್ಮೀರಿ ಭಟ್ ಸಮುದಾಯಕ್ಕೆ ಸೇರಿದ ಈ ಕುಟುಂಬ ಮೊದಲು ಭಾರತದ ಅಮೃತಸರದ ಜಟಿ ಉಮ್ರ ಎಂಬ ಪುಟ್ಟ ಗ್ರಾಮದಲ್ಲಿ ನೆಲೆ ಕಂಡುಕೊಂಡಿತ್ತು. ದೇಶ ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನದ ಲಾಹೋರ್‌ಗೆ ವಲಸೆ ಹೋಯಿತು. ಅಲ್ಲಿನ ರಾಜಕೀಯ ಕ್ಷಿತಿಜದಲ್ಲಿ ದೊಡ್ಡದಾಗಿ ಬೆಳೆದ ನವಾಜ್ ಹಾಗೂ ಅವರ ಕಿರಿಯ ಸಹೋದರ ಶಹಬಾಝ್ ಅವರ ತಾಯಿ ಶಮಿಮ್ ಅಖ್ತರ್ ಸಹ ಭಾರತದ ಪುಲ್ವಾಮಾದವರು.

ಪಾಕಿಸ್ತಾನ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) ಪಕ್ಷದ ಪ್ರಶ್ನಾತೀತ ನಾಯಕ ನವಾಜ್ ಅವರು ಮೂರು ಬಾರಿ ಆ ದೇಶದ ಪ್ರಧಾನಿಯಾಗಿದ್ದವರು. ಅಲ್ಲಿ ಅತ್ಯಂತ ಹೆಚ್ಚಿನ ಅವಧಿಗೆ ಪ್ರಧಾನಿಯಾದ ದಾಖಲೆಯೂ ಅವರದಾಗಿದೆ. ಸುಪ್ರೀಂ ಕೋರ್ಟ್‌ನಿಂದ ಜೈಲು ಶಿಕ್ಷೆಗೆ ಒಳಗಾದ ಅವರು, ಸದ್ಯ ಚಿಕಿತ್ಸೆ ಪಡೆಯುವ ನೆಪದಲ್ಲಿ ಲಂಡನ್‌ನಲ್ಲಿ ವಾಸವಾಗಿದ್ದಾರೆ. ಅಣ್ಣನ ಅನುಪಸ್ಥಿತಿಯಲ್ಲಿ ಪಿಎಂಎಲ್–ಎನ್ ಪಕ್ಷವನ್ನು ಮುನ್ನಡೆಸುತ್ತಿರುವ ಶಹಬಾಝ್, ರಾಜಕೀಯವಾಗಿ ತುಂಬಾ ಚಾಣಾಕ್ಷ. ಇಮ್ರಾನ್ ಖಾನ್ ನೇತೃತ್ವದ ಸರ್ಕಾರವನ್ನು ಪದಚ್ಯುತಗೊಳಿಸಲು ವಿರೋಧ ಪಕ್ಷವನ್ನು ಅವರು ಒಗ್ಗೂಡಿಸಿದ ರೀತಿ ಬೆರಗು ಮೂಡಿಸುವಂಥದ್ದು. ತದ್ವಿರುದ್ಧ ನೀತಿಗಳುಳ್ಳ ಪಕ್ಷಗಳನ್ನು ಒಟ್ಟುಗೂಡಿಸುವುದೆಂದರೆ ಕಪ್ಪೆಗಳನ್ನು ತೂಕ ಮಾಡಿದಂತೆ. ಅದರಲ್ಲಿ ಯಶಸ್ವಿಯಾಗಿರುವ ಶಹಬಾಝ್, ಈಗ ಬಹುಮತ ಪಡೆದು ಬೀಗಿದ್ದಾರೆ.

ಶಹಬಾಝ್ ಏನೂ ಏಕಾಏಕಿ ಪ್ರಧಾನಿ ಹುದ್ದೆಗೆ ಏರಿ ಬಂದವರಲ್ಲ. ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ಮೂರು ಅವಧಿಯವರೆಗೆ ಅಧಿಕಾರ ಚಲಾಯಿಸಿದ ಅವರು ವ್ಯಾಪಕವಾದ ಆಡಳಿತದ ಅನುಭವವನ್ನೂ ಹೊಂದಿದ್ದಾರೆ. ಇಮ್ರಾನ್ ಖಾನ್ ಪ್ರಧಾನಿಯಾಗಿದ್ದಾಗ ವಿರೋಧ ಪಕ್ಷದ ನಾಯಕರಾಗಿಯೂ ಹೊಣೆ ನಿಭಾಯಿಸಿದ್ದಾರೆ. ಸಮಯ ನೋಡದೆ ಸದಾ ಕೆಲಸ ಮಾಡುವುದಕ್ಕೆ ಹೆಸರಾಗಿರುವ ಅವರು, ಪಂಜಾಬ್ ಮುಖ್ಯಮಂತ್ರಿಯಾಗಿದ್ದಾಗ ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದ ಖ್ಯಾತಿಯನ್ನೂ ಹೊಂದಿದ್ದಾರೆ. ಭಾರತದ ಪ್ರಧಾನಿ ಮೋದಿಯವರಂತೆಯೇ 'ನಾನು ಪ್ರಧಾನ ಸೇವಕ (ಖಾದಿಮ್ ಎ ಆಲಾ)' ಎಂದು ಕರೆದುಕೊಳ್ಳುತ್ತಾರೆ.

ಪಂಜಾಬ್‌ನಲ್ಲಿ ಜಾರಿಗೆ ಬಂದ ಮೆಟ್ರೊ ಬಸ್ ಯೋಜನೆ ಶಹಬಾಝ್ ಅವರ ಸಾಧನೆಯ ಹೆಗ್ಗುರುತುಗಳಲ್ಲಿ ಒಂದು. ಅತ್ಯಂತ ಬಲಿಷ್ಠ ನಾಯಕ ಎಂದು ಗುರ್ತಿಸಿಕೊಂಡಿರುವ ಅವರು, ಕಠಿಣ ನಿಲುವುಗಳಿಗೆ ಕೂಡ ಹೆಸರಾದವರು. ಪಾಕಿಸ್ತಾನದಲ್ಲಿ ಅಭಿವೃದ್ಧಿ ಹೊಂದಿದ ನಗರವಾಗಿ ಲಾಹೋರ್ ರೂಪುಗೊಳ್ಳುವುದರಲ್ಲಿ ಶಹಬಾಝ್ ಅವರ ಪಾತ್ರ ದೊಡ್ಡದಿದೆ ಎಂದು ವಿಶ್ಲೇಷಿಸಲಾಗುತ್ತದೆ. ಅಣ್ಣ ನವಾಜ್ ಮೇಲೆ ಅಪಾರ ಪ್ರೀತಿಯನ್ನು ಹೊಂದಿರುವ ಅವರು, 'ಜಿನ್ನಾ ಅವರ ಉತ್ತರಾಧಿಕಾರಿ ಎಂದು ಯಾರನ್ನಾದರೂ ನೀವು ಗುರ್ತಿಸುವುದಾದರೆ ನವಾಜ್ ಬಿಟ್ಟರೆ ಬೇರೊಬ್ಬ ನಾಯಕ ನಿಮಗೆ ಸಿಗಲಾರರು' ಎಂದು ಹೇಳುತ್ತಾರೆ.

ಸೈನ್ಯದ ಜತೆಗೆ ನವಾಜ್ ಅವರದು ಸಂಘರ್ಷದ ಸಂಬಂಧವಾದರೆ, ಶಹಬಾಝ್ ಅವರು ಸಹಮತದ ನಂಟಿಗೆ ಹಂಬಲಿಸುವವರು. ಸೈನ್ಯ ಮತ್ತು ಸರ್ಕಾರ ಎರಡೂ ಸೇರಿಯೇ ದೇಶವನ್ನು ಸುಸ್ಥಿರ ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ಅವರು ಹೇಳುತ್ತಾರೆ. ಅವರ ಈ ನಿಲುವಿನಿಂದಾಗಿ ಅಧಿಕಾರದ ಅವಧಿಯಲ್ಲಿ ಸೈನ್ಯದಿಂದ ಅವರು ಕಿರಿಕಿರಿ ಅನುಭವಿಸುವ ಸಾಧ್ಯತೆಯೂ ಕಡಿಮೆ ಎಂದು ವ್ಯಾಖ್ಯಾನಿಸಲಾಗಿದೆ. ಶಹಬಾಝ್ ಅವರ ಮೇಲೆ ಭ್ರಷ್ಟಾಚಾರದ ಆರೋಪಗಳೂ ವ್ಯಾಪಕವಾಗಿ ಕೇಳಿಬಂದಿವೆ. ತಮ್ಮ ಸ್ವಜನಪಕ್ಷಪಾತ ಧೋರಣೆಗೂ ಟೀಕೆ ಎದುರಿಸಿದ್ದಿದೆ. ಶಹಬಾಝ್ ಅವರ ಮಗ ಪಂಜಾಬ್ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದ ನಾಯಕ. ಅವರನ್ನೇ ಮುಖ್ಯಮಂತ್ರಿ ಹುದ್ದೆಗೆ ಏರಿಸುವ ಪ್ರಯತ್ನಗಳೂ ನಡೆದಿವೆ. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೋರ್ಟ್‌ನಿಂದ ಶಿಕ್ಷೆಗೂ ಒಳಗಾದವರು ಶಹಬಾಝ್. ಕಾಶ್ಮೀರದ ವಿಷಯವಾಗಿ ಯಥಾಪ್ರಕಾರ ತಗಾದೆ ತೆಗೆಯುವ ಮಾತುಗಳನ್ನು ಅವರು ಆಡಿದ್ದಾರೆ. ಅವರಿಗೆ ಇಬ್ಬರು ಪತ್ನಿಯರು. ಕುಟುಂಬದ ಆಚೆಗೂ ಅವರಿಗೆ ಕೆಲವು ಪತ್ನಿಯರು ಇದ್ದಾರೆ ಎಂಬ ಗುಲ್ಲು ಎದ್ದಿದೆ. 'ಮಿಯಾ' ಯಾವ ಆರೋಪಕ್ಕೂ ಕ್ಯಾರೆ ಎನ್ನದೆ ಪಾಕಿಸ್ತಾನದ ಅಧಿಕಾರದ ಚುಕ್ಕಾಣಿ ಹಿಡಿದು ಕುಳಿತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65